# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 197
2) ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 14-02-2024
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯಡಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ; (ಜಿಲ್ಲಾವಾರು ಅಂಕಿ-ಅಂಶಗಳ ವಿವರ ನೀಡುವುದು) | ಕಳೆದ ಐದು ವರ್ಷಗಳಲ್ಲಿ 2018-19 ನೇ ಸಾಲಿನಿಂದ 2021-22 ನೇ ಸಾಲಿನವರೆಗೆ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳ ಹಂಚಿಕೆಯಾಗಿರುವುದಿಲ್ಲ. ಆದರೆ, 2022-23 ನೇ ಸಾಲಿನಲ್ಲಿ ಮಂಜೂರಾದ 5000 ಮನೆಗಳಲ್ಲಿ 4987 ಮನೆಗಳನ್ನು ವಿವಿಧ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿದೆ. ಸದರಿ ಹಂಚಿಕೆ ಮಾಡಲಾದ 4987 ಮನೆಗಳಲ್ಲಿ ಅನುಮೋದನೆ / ಫಲಾನುಭವಿಗಳ ಆಯ್ಕೆಯಾಗದೇ ಇದ್ದಂತಹ 2621 ಮನೆಗಳನ್ನು ಹಿಂಪಡೆದು ಮರುಹಂಚಿಕೆ ಮಾಡಲಾಗಿದೆ. ಜಿಲ್ಲಾವಾರು ಅಂಕಿ ಅಂಶಗಳ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.. |
| ಆ) | ಈ ಯೋಜನೆಯಡಿ ಉಚಿತ ಮನೆ ಹಂಚಿಕೆ ಮಾಡಲು ಇರುವ ಮಾನದಂಡವೇನು; (ವಿವರ ನೀಡುವುದು) | ಮತ್ಸ್ಯಾಶ್ರಯ ಯೋಜನೆಯಡಿ ನಿರ್ವಸತಿ ಮೀನುಗಾರರಿಗೆ ಮನೆ ನಿರ್ಮಾಣಕ್ಕಾಗಿ ಸಹಾಯಧನ ವನ್ನು ನೀಡಲು ಅನುಸರಿಸುವ ಮಾನದಂಡಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ) | ಕಳೆದ 5 ವರ್ಷಗಳಲ್ಲಿ ಈ ಯೋಜನೆಯಡಿಯಲ್ಲಿ ಸರ್ಕಾರದಿಂದ ಬಿಡುಗಡೆ ಯಾದ ಅನುದಾನ ಎಷ್ಟು; ಖರ್ಚಾದ ಮತ್ತು ಉಳಿಕೆ ಅನುದಾನ ಎಷ್ಟು? (ವಾರ್ಷಿಕವಾರು ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ಈ ಯೋಜನೆಯಡಿಯಲ್ಲಿ ಬಿಡುಗಡೆಯಾದ, ಖರ್ಚಾದ ಮತ್ತು ಉಳಿಕೆಯಾದ ಅನುದಾನದ ವಾರ್ಷಿಕವಾರು ವಿವರಗಳು ಕೆಳಕಂಡಂತಿದೆ:- (ರೂ.ಲಕ್ಷಗಳಲ್ಲಿ) |

| ವರ್ಷ | ಬಿಡುಗಡೆ | ಖರ್ಚು | ಉಳಿಕೆ |
|---|---|---|---|
| 2018-19 | 2018-19 ನೇ ಸಾಲಿನಿಂದ 2021-22 ನೇ ಸಾಲಿನವರೆಗೆ ಯಾವುದೇ ಮನೆಗಳ ಹಂಚಿಕೆ ಯಾಗಿರುವುದಿಲ್ಲ ಹಾಗು ಅನುದಾನ ಬಿಡುಗಡೆ ಯಾಗಿರುವುದಿಲ್ಲ. | | |
| 2019-20 | | | |
| 2020-21 | | | |
| 2021-22 | | | |
| 2022-23 | 3482.40 | 1238.73 | 2243.67 |

ಸಂಖ್ಯೆ: ಪಸಂಮೀ ಇ-21 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಅನುಬಂಧ - 1

## 2022-23 ನೇ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಜಿಲ್ಲಾವಾರು ಹಂಚಿಕೆ ಮಾಡಲಾದ ಮನೆಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | 2022-23 ನೇ ಸಾಲಿನಲ್ಲಿ ಮಂಜೂರಾದ 5000 ಮನೆಗಳಲ್ಲಿ ಹಂಚಿಕೆ ಮಾಡಲಾದ ಒಟ್ಟು ಮನೆಗಳ ಸಂಖ್ಯೆ | ಹಂಚಿಕೆ ಮಾಡಲಾದ 5000 ಮನೆಗಳ ಪೈಕಿ ಅನುಮೋದನೆಯಾಗದ 2621 ಮನೆಗಳನ್ನು ಹಿಂಪಡೆದು ಮರು ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ |
|---|---|---|---|
| 1 | ಬೆಳಗಾವಿ | 507 | 25 |
| 2 | ಬಾಗಲಕೋಟೆ | 202 | 0 |
| 3 | ಬಿಜಾಪುರ | 237 | 20 |
| 4 | ಗುಲ್ಬರ್ಗಾ | 95 | 125 |
| 5 | ಯಾದಗಿರಿ | 37 | 10 |
| 6 | ಬೀದರ್ | 65 | 29 |
| 7 | ರಾಯಚೂರು | 63 | 50 |
| 8 | ಕೊಪ್ಪಳ | 75 | 95 |
| 9 | ಗದಗ | 35 | 0 |
| 10 | ಧಾರವಾಡ | 115 | 0 |
| 11 | ಉತ್ತರಕನ್ನಡ | 385 | 300 |
| 12 | ಹಾವೇರಿ | 150 | 0 |
| 13 | ವಿಜಯನಗರ | 50 | 15 |
| 14 | ಬಳ್ಳಾರಿ | 145 | 50 |
| 15 | ಚಿತ್ರದುರ್ಗ | 130 | 25 |
| 16 | ದಾವಣಗೆರೆ | 100 | 0 |
| 17 | ಶಿವಮೊಗ್ಗ | 95 | 35 |
| 18 | ಉಡುಪಿ | 725 | 187 |
| 19 | ಚಿಕ್ಕಮಗಳೂರು | 95 | 100 |
| 20 | ತುಮಕೂರು | 183 | 60 |
| 21 | ಚಿಕ್ಕಬಳ್ಳಾಪುರ | 85 | 10 |

| | | | |
|---|---|---|---|
| 22 | ಕೋಲಾರ | 147 | 30 |
| 23 | ಬೆಂಗಳೂರು (ನ) | 180 | 0 |
| 24 | ರಾಮನಗರ | 70 | 50 |
| 25 | ಮಂಡ್ಯ | 180 | 25 |
| 26 | ಹಾಸನ | 100 | 15 |
| 27 | ದಕ್ಷಿಣಕನ್ನಡ | 450 | 455 |
| 28 | ಕೊಡಗು | 65 | 0 |
| 29 | ಮೈಸೂರು | 160 | 125 |
| 30 | ಚಾಮರಾಜನಗರ | 40 | 0 |
| 31 | ಬೆಂಗಳೂರು ಗ್ರಾ | 21 | 25 |
| | ಒಟ್ಟು | 4987 | 1861 |

# ಅನುಬಂಧ-2

**ಮತ್ಸ್ಯಾಶ್ರಯ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಗಿನಂತಿರುತ್ತವೆ.**

1) ಫಲಾನುಭವಿಯು ಹುಟ್ಟು/ವೃತ್ತಿಯಲ್ಲಿ ಮೀನುಗಾರನಾಗಿರಬೇಕು. ಮೀನುಗಾರಿಕೆಗೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಸಹ ಆಯ್ಕೆ ಮಾಡಬಹುದಾಗಿದೆ.
2) ಫಲಾನುಭವಿಯು ವಿವಾಹಿತನಾಗಿರಬೇಕು
3) ಫಲಾನುಭವಿಯು ಸ್ವಂತ ನಿವೇಶನ ಹೊಂದಿರತಕ್ಕದ್ದು
4) ಫಲಾನುಭವಿಯು ಸ್ಥಳೀಯ ಮೀನುಗಾರರ ಸಹಕಾರ ಸಂಘದ ಸದಸ್ಯನಾಗಿರಬೇಕು. ಇಲ್ಲದಿದ್ದಲ್ಲಿ ಕಳೆದ ಮೂರು ವರ್ಷಗಳಿಂದ ಮೀನುಗಾರಿಕೆಯಲ್ಲಿ ತೊಡಗಿರುವ ಬಗ್ಗೆ ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರು ದೃಢೀಕರಿಸಬೇಕು
5) ಫಲಾನುಭವಿಯು ಸರ್ಕಾರದ ಇತರೆ ವಸತಿ ಯೋಜನೆಯಡಿ ಸೌಲಭ್ಯವನ್ನು ಪಡೆದಿರಬಾರದು. ಈ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ, ಮುನಿಸಿಪಾಲಿಟಿ, ನಗರ ಸಭೆ ಮುಂತಾದ ಸಂಸ್ಥೆಗಳಿಂದ ದೃಢೀಕರಣ ಹೊಂದಿರತಕ್ಕದ್ದು. ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದವರಾಗಿರತಕ್ಕದ್ದು.

ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳಿಗೆ ಫಲಾನುಭವಿಗಳ ಆಯ್ಕೆಯನ್ನು ಸರ್ಕಾರದ ಆದೇಶ ಸಂಖ್ಯೆ.ಪಸಂಮೀ 112 ಮೀಇಯೋ 2007(ಭಾಗ), ಬೆಂಗಳೂರು,ದಿ:31-7-2008 ರಂತೆ ಆಯ್ಕೆ ಸಮಿತಿಯನ್ನು ರಚಿಸಿ ಆಯ್ಕೆಯನ್ನು ಮಾಡಲಾಗುತ್ತಿದೆ.

**ಆಯ್ಕೆ ಸಮಿತಿಯ ವಿವರ**

ಅಧ್ಯಕ್ಷರು: ಆಯಾ ವಿಧಾನ ಸಭಾ ಕ್ಷೇತ್ರದ ಶಾಸಕರು

ಸಹ ಅಧ್ಯಕ್ಷರು: ವಿಧಾನ ಪರಿಷತ್ತಿನ ಸದಸ್ಯರು (ಅವರ ವ್ಯಾಪ್ತಿಯ ಅಪೇಕ್ಷಿಸಿದ ಯಾವುದಾದರೊಂದು ವಿಧಾನ ಸಭಾ ಕ್ಷೇತ್ರಕ್ಕೆ ಸೀಮಿತವಾದಂತೆ)
ಸದಸ್ಯಕಾರ್ಯದರ್ಶಿ: ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು.

ಮತ್ಸ್ಯಾಶ್ರಯ ಯೋಜನೆಯಡಿ ವಸತಿ ಸೌಲಭ್ಯವನ್ನು ಪಡೆಯುವ ಫಲಾನುಭವಿಯು ಮೇಲೆ ಪಟ್ಟಿ ಮಾಡಲಾದ ಅರ್ಹತೆಗಳ ಮೇರೆಗೆ ಆಯ್ಕೆ ಸಮಿತಿಯು ಕಾರ್ಯನಿರ್ವಹಿಸುತ್ತಿದೆ.

**ಸಹಾಯಧನದ ವಿವರ:**

ಮತ್ಸ್ಯಾಶ್ರಯ ಮನೆಯ ಕಾಮಗಾರಿಗಳನ್ನು ಅಡಿಪಾಯ, ಗೋಡೆ ಮತ್ತು ಛಾವಣಿ ಎಂದು 3 ವಿವಿಧ ಹಂತವನ್ನಾಗಿ ವಿಂಗಡಿಸಿದ್ದು, ಸದರಿ ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ನಿರ್ಮಿಸುವ ಮನೆ ಕಾಮಗಾರಿಯ ಹಂತಕ್ಕೆ ತಕ್ಕಂತೆ ಮೂರು ಕಂತುಗಳಲ್ಲಿ ಸಹಾಯಧನವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.. ಸಹಾಯಧನವನ್ನು

ಮೊದಲನೇ ಕಂತಿನಲ್ಲಿ ಶೇ:20 ರಷ್ಟು, ಎರಡನೇ ಕಂತಿನಲ್ಲಿ ಶೇ: 40 ರಷ್ಟು ಮತ್ತು ಮೂರನೇ ಕಂತಿನಲ್ಲಿ ಶೇ: 40 ರಷ್ಟು ನೀಡಲಾಗುವುದು.

2017-18 ನೇ ಸಾಲಿನಿಂದ ಈ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದ ಸಾಮಾನ್ಯ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ರೂ. 1.20 ಲಕ್ಷ ಪರಿಶಿಷ್ಟಜಾತಿ/ಪಂಗಡ ಫಲಾನುಭವಿಗಳಿಗೆ ರೂ.1.75 ಲಕ್ಷ ಮತ್ತು ನಗರ ಪ್ರದೇಶದ ಪರಿಶಿಷ್ಟಜಾತಿ/ಪಂಗಡದ ಫಲಾನುಭವಿಗಳಿಗೆ ರೂ. 2.00 ಲಕ್ಷ ಸಹಾಯಧನವನ್ನು ಒದಗಿಸಲಾಗುತ್ತಿದೆ.